# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

ಎಸ್‌ಸಿ. 216/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ದಯಾನಂದ.ಎಂ.ವಿ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಎ.ವಾಸು | | **30.12.2024** |
| ವಯಸ್ಸು | ಃ **45** ವರ್ಷ | | |
| ವೃತ್ತಿ | ಃ ದಿನಸಿ ವ್ಯಾಪಾರ | **ಪ್ರಾ.ಸಾ.** | ಃ **04** |
| ವಾಸಸ್ಥಳ | ಃ ಕೆ.ಸಿ.ಲೇಔಟ್, ಮೈಸೂರು | **ಚಾ.ಸಾ.** | ಃ **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಆರೋಪಿ ರಘು ನನ್ನ ತಮ್ಮನಾಗಬೇಕು. ಚಾ.ಸಾ-*4* ಅನೂಪ್ ಕುಮಾರ್ ನನ್ನ ಶಡ್ಡಕನಿರುತ್ತಾನೆ. *2012* ರಿಂದ *2021* ರ ಈ ಪ್ರಕರಣದ ಘಟನೆ ನಡೆಯುವರೆಗೆ ನಾನು ಮತ್ತು ಆರೋಪಿ ಕೆ.ಸಿ.ಲೇಔಟ್ ನ ಮನೆ ಸಂಖ್ಯೆ *311* ರಲ್ಲಿ ವಾಸವಿದ್ದೇವು. ಆ ಮನೆ ಡ್ಯೂಪ್ಲೆಕ್ಸ್ ಮನೆಯಾಗಿದ್ದು ನೆಲ ಮಹಡಿಯಲ್ಲಿ ಆರೋಪಿ, ಆತನ ಕುಟುಂಬಸ್ಥರು ಮತ್ತು ನನ್ನ ತಂದೆ ತಾಯಿಗಳು ವಾಸವಿದ್ದರು. ಮೊದಲ ಮಹಡಿಯಲ್ಲಿರುವ ರೂಮ್ ನಲ್ಲಿ ನಾನು ನನ್ನ ಕುಟುಂಬದ ಜೊತೆ ವಾಸವಿದ್ದೆ. ಮೊದಲ ಮಹಡಿಯ ಇನ್ನೊಂದು ನನ್ನ ಇನ್ನೊಬ್ಬ ತಮ್ಮ ಕೃಷ್ಣ ವಾಸವಿದ್ದ. ಆರೋಪಿ ನನ್ನ ತಂದೆಂಯಿಂದ ನಮ್ಮ ಕುಟುಂಬದ ಎಲ್ಲಾ ಆಸ್ತಿಯ ಕುರಿತು ಮರಣಶಾಸನ ಪತ್ರ ಮಾಡಿಸಿಕೊಂಡಿದ್ದ ಅದು ನನಗೆ ಗೊತ್ತಾಗಿ ಅದನ್ನು ಪ್ರಶ್ನೆ ಮಾಡಿದಾಗ ನನ್ನ ತಂದೆಯೂ ಸಹ ಆ ಮರಣಶಾಸನ ಪತ್ರ ರದ್ದು ಪಡಿಸಲು ಒಪ್ಪಿರಲಿಲ್ಲ ಆಗ ನಾನು ಪಾಲು ದಾವೆ ಹಾಕಿದ್ದೆ. ಆ ದಾವೆ

ಹಾಕಿದ ಬಳಿಕವೂ ಸಹ ಆರೋಪಿ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನ ಮಾಡಿದಾಗ ನಾನು ಮಧ್ಯಂತರ ಅರ್ಜಿ ಹಾಕಿ ದಾವೆ ಮುಗಿಯುವ ವರೆಗೆ ಮಾರಾಟ ಮಾಡದಂತೆ ಮಧ್ಯಂತರ ಆದೇಶ ಪಡೆದುಕೊಂಡಿದ್ದೆ. ಆ ಕಾಲಕ್ಕೆ ಆರೋಪಿ ಇವನು ಇದ್ದರೆ ನನಗೆ ಆಸ್ತಿ ಸಿಗುವುದಿಲ್ಲ ಎಂದು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ದಿಃ*01.03.2021* ರಂದು ರಾತ್ರಿ *10.45* ಕ್ಕೆ ನಾನು ಮನೆಯ ಒಳಗಡೆ ಎಂಟ್ರಿಯಾಗಿ ಸ್ಟೇರ್ ಕೇಸ್ ಹತ್ತುವ ಕಾಲಕ್ಕೆ ಆರೋಪಿ ಮೇಲುಗಡೆ ನಿಂತುಕೊಂಡು ಕಾಯಿಸಿದ ಎಣ್ಣೆಯನ್ನು ಬಕೆಟ್ ನಿಂದ ನನ್ನ ತಲೆ ಮೇಲೆ ಸುರಿದಿದ್ದ. ಆ ರೀತಿ ಎಣ್ಣೆ ಸುರಿದ ಬಳಿಕ ನಾನು ಮನೆಯಿಂದ ಹೊರಗೆ ಬಂದಿದ್ದೆ. ಆ ಕಾಲಕ್ಕೆ ನಮ್ಮ ಮನೆಯ ಹಿಂಭಾಗದಲ್ಲಿ ವಾಸವಿರುವ ಸೋಮಶೇಖರ್ ಎನ್ನುವವರು ಬಂದು ನನ್ನನ್ನು ಗೋಪಾಲಗೌಡ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ಆ ಸೋಮಶೇಖರ್ ಇವರು ನನ್ನ ಹೆಂಡತಿಗೆ ತಿಳಿಸಿದಾಗ ನನ್ನ ಹೆಂಡತಿ ಮತ್ತು ಶಡ್ಡಕ ಅಲ್ಲಿಗೆ ಬಂದು ನನ್ನನ್ನು ಹೆಚ್ಚಿನ ಚಿಕಿತ್ಸೆ ಗೆ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ಜೆ.ಎಸ್.ಎಸ್ ಆಸ್ಪತ್ರೆಯಿಂದ ಅನಘ ಆಸ್ಪತ್ರೆಗೆ ದಾಖಲಸಿದ್ದರು. ಅನಘ ಆಸ್ಪತ್ರೆಯಲ್ಲಿ ಸುಟ್ಟ ಗಾಯಗಳಿಗೆ ವಿಶೇಷ ಚಿಕಿತ್ಸೆ ದೊರೆಯುತ್ತದೆ ಎಂದು ಹೇಳಿದ್ದರಿಂದ ನಾನು ಅಲ್ಲಿಗೆ ದಾಖಲಾಗಿದ್ದೆ. ಅನಘ ಆಸ್ಪತ್ರೆಯಲ್ಲಿ *2* ವಾರ ಚಿಕಿತ್ಸೆ ನೀಡಿ ಡಿಸ್ಚಾರ್ಜ್ ಮಾಡಿದ್ದರು.

*2.* ಜೆ.ಎಸ್.ಎಸ್ ಆಸ್ಪತ್ರೆಯಲ್ಲಿದ್ದಾಗ ದಿಃ*02.03.2021* ರಂದು ಪೊಲೀಸರು ನನ್ನ ಹೇಳಿಕೆ ಪಡೆದಿದ್ದರು. ಈಗ ನಾನು ನೋಡುತ್ತಿರುವ ಎಂ.ಒ–*1* ಬಕೆಟ್ ನಿಂದ ಆ ದಿನ ಆರೋಪಿ ನನಗೆ ಎಣ್ಣೆ ಸುರಿದಿದ್ದ. ಈಗ ನಾನು ನೋಡುತ್ತಿರುವ ದಾಖಲೆ ನಾನು ಆಸ್ಪತ್ರೆಯಲ್ಲಿ ನೀಡಿದ್ದ ಹೇಳಿಕೆಯಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿ.ಪಿ–*5* ಮತ್ತು ಸಹಿಯನ್ನು ನಿ.ಪಿ–*5(*ಎ*)* ಎಂದು ಗುರುತಿಸಿದೆ. ಎಣ್ಣೆ ಸುರಿದಿದ್ದರಿಂದ ನನಗೆ ತಲೆಯಿಂದ ಕಾಲಿನ ವರೆಗೆ ಸುಟ್ಟ

ಗಾಯಗಳಾಗಿದ್ದವು. ಆ ಘಟನೆ ಕಾಲಕ್ಕೆ ನಾನು ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂ.ಒ-*3* ರಿಂದ *5* ಆ ಬಟ್ಟೆಗಳಿವೆ. ತನಿಖೆ ಕಾಲಕ್ಕೆ ಸಿವಿಲ್ ವ್ಯಾಜ್ಯದ ಕುರಿತು ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿದ್ದು ಈ ದಿನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಗಳನ್ನು ಒಟ್ಟಿಗೆ ನಿ.ಪಿ-*6* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಫೋಟೋಗಳನ್ನು ನಾನು ಆಸ್ಪತ್ರೆಯಲ್ಲಿದ್ದಾಗ ಚಾ.ಸಾ-*4* ಅನೂಪ್ ಕುಮಾರ್ ಇವರ ಮೂಲಕ ತೆಗೆಸಿದ್ದೆ. ಸದರಿ ಫೋಟೋಗಳನ್ನು ನಿ.ಪಿ-*7* ರಿಂದ *13* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ದಾಖಲೆ ಅನೂಪ್ ಕುಮಾರ್ ಇವರು ಕೊಟ್ಟ ಕಲಂ *65* ಬಿ ಪ್ರಮಾಣಪತ್ರ ಇದೆ. ಸದರಿ ದಾಖಲೆಯನ್ನು ನಿ.ಪಿ-*14* ಎಂದು ಗುರುತಿಸಿದೆ. ಅನಘ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕುರಿತು ದಾಖಲೆಗಳನ್ನು ಕೊಟ್ಟಿದ್ದೇನೆ. ಸದರಿ ದಾಖಲೆಗಳನ್ನು ಒಟ್ಟಿಗೆ ನಿಪಿ-*15* ಎಂದು ಗುರುತಿಸಿದೆ.

ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*